# ನವರತ್ನದ ಹೊಳಪಿನಲ್ಲಿ ಮೋಕ್ಷಾ



'ಆದಿಪುರಾಣ'ದಲ್ಲಿ ಮಾಡರ್ನ್ ಹುಡುಗಿಯಾಗಿ ನಟಿಸುವುದರ ಮೂಲಕ ಚಂದನವನಕ್ಕೆ ಕಾಲಿಟ್ಟಿದ್ದ ಚೆಲುವೆ ಮೋಕ್ಷಾ ಕುಶಾಲ್. ಸಂಪಿಗೆ ಮೊಗದ ಈ ಹುಡುಗಿ ಈಗ ನವರತ್ನ ದಕ್ಕಿದ ಸಂತಸದಲ್ಲಿದ್ದಾರೆ. ಅಂದಹಾಗೆ, 'ನವರತ್ನ', ಪ್ರತಾಪ್‌ರಾಜ್ ನಿರ್ದೇಶಿಸಿ ನಾಯಕನಾಗಿ ನಟಿಸಿರುವ ಸಿನಿಮಾ. ಈ ಚಿತ್ರದ ಮೂಲಕ ಅವರು ಮೋಕ್ಷಾ ಪೂರ್ಣಪ್ರಮಾಣದ ನಾಯಕಿಯಾಗಿ ಬಡ್ತಿ ಪಡೆದಿದ್ದಾರೆ.

'ನವರತ್ನ ಸಿನಿಮಾ ನನ್ನ ಮಟ್ಟಿಗೆ ತುಂಬ ಮಹತ್ವದ ಮತ್ತು ಮಹತ್ವಾಕಾಂಕ್ಷೆಯ ಅವಕಾಶ. ಈ ಸಿನಿಮಾದ ಮೂಲಕ ಪೂರ್ಣಪ್ರಮಾಣದಲ್ಲಿ ನಾಯಕಿಯಾಗಿದ್ದೇನೆ. ನನ್ನದು ವೈಲ್ಡ್‌ಲೈಫ್ ಫೋಟೊಗ್ರಾಫರ್ ಪಾತ್ರ. ಸಿನಿಮಾದ ಶೇ 80ರಷ್ಟು ಭಾಗವನ್ನು ಕಾಡಿನಲ್ಲಿಯೇ ಚಿತ್ರೀಕರಿಸಿದ್ದೇವೆ. ಕಾಡಿನಲ್ಲಿಯೇ ನಾಯಕ ಮತ್ತವನ ಸ್ನೇಹಿತ ನನಗೆ ಸಿಗುತ್ತಾರೆ. ನಂತರ ಒಂದಿಷ್ಟು ಸಸ್ಪೆನ್ಸ್ ಮತ್ತು ಥ್ರಿಲ್ಲರ್ ಘಟನೆಗಳು ನಡೆಯುತ್ತವೆ' ಎಂದು ಬಹುಸೂಕ್ಷ್ಮವಾಗಿ ಚಿತ್ರಕಥೆಯ ಕುರಿತು ಹೇಳುವ ಅವರು, 'ಮುಂದೆ ಏನಾಗುತ್ತದೆ ಎನ್ನುವುದನ್ನು ತೆರೆಯ ಮೇಲೇ ನೋಡಬೇಕು' ಎಂಬ ಷರತ್ತನ್ನೂ ಎಸೆಯುತ್ತಾರೆ.

ಈ ಪಾತ್ರಕ್ಕಾಗಿ ಸಾಕಷ್ಟು ಹೋಂ ವರ್ಕ್ ಮಾಡಿರುವ ಮೋಕ್ಷಾ, ಜನರು ತನ್ನನ್ನು ಹೇಗೆ ಸ್ವೀಕರಿಸುತ್ತಾರೋ ಎಂಬ ಭಯಮಿಶ್ರಿತ ಕುತೂಹಲದಲ್ಲಿಯೇ ಕಾಯುತ್ತಿದ್ದಾರೆ. 'ನವರತ್ನ' ಸಿನಿಮಾ ಈಗಾಗಲೇ ಪೂರ್ಣಗೊಂಡಿದ್ದು ಸೆನ್ಸಾರ್ ಅಂಗಳದಲ್ಲಿದೆ. ಮುಂದಿನ ತಿಂಗಳು ಬಿಡುಗಡೆ ಮಾಡುವ ಸಿದ್ಧತೆಯಲ್ಲಿ ಚಿತ್ರತಂಡವಿದೆ.

'ಈ ಸಿನಿಮಾಕ್ಕೆ ಜನ ಹೇಗೆ ಪ್ರತಿಕ್ರಿಯಿಸುತ್ತಾರೆ ಎನ್ನುವುದರ ಮೇಲೆ ಮುಂದಿನ ಸಿನಿಮಾಗಳನ್ನು ಆಯ್ದುಕೊಳ್ಳುತ್ತೇನೆ' ಎನ್ನುವ ಮೋಕ್ಷಾ ಈಗಾಗಲೇ ಯೋಗರಾಜ ಭಟ್ಟರ 'ಗಾಳಿಪಟ 2' ಸಿನಿಮಾ ಆಡಿಷನ್‌ನಲ್ಲಿ ಭಾಗವಹಿಸಿ ಬಂದು ಅವರ ಪ್ರತಿಕ್ರಿಯೆಗಾಗಿಯೂ ಕಾಯುತ್ತಿದ್ದಾರೆ. ■

# ದಾಸ್ ಕಮ್ ಬ್ಯಾಕ್



ಸಿನಿಮಾಪ್ರಿಯರಿಗೆ ಅ ಷ್ಟು

ವೈ. ಯೇಸುದಾಸ್ ಹೆಸರು ಹೊಸಪೀಳಿಗೆಯ ಅಪರಿಚಿತವೇನಲ್ಲ. ಜಗ್ಗೇಶ್ ಅಭಿನಯದ 'ಅಳಿಯ ಅಲ್ಲ, ಮಗಳ ಗಂಡ', 'ಸೋಮ'ದಂಥ ಸಿನಿಮಾಗಳನ್ನು ನಿರ್ದೇಶಿಸಿದ್ದ ಅವರು ಹತ್ತಿರ ಹತ್ತಿರ ದಶಕದ ನಂತರ ಮತ್ತೆ ನಿರ್ದೇಶಕನ ಟೋಪಿ ತೊಡುತ್ತಿದ್ದಾರೆ.

ಹೊಸ ಹುಡುಗರನ್ನು ಇಟ್ಟುಕೊಂಡು, ಲವ್, ಥ್ರಿಲ್ ಮತ್ತು ಆ್ಯಕ್ಷನ್ ಮೂರೂ ಅಂಶಗಳನ್ನು ಹದವಾಗಿ ಬೆರೆಸಿದ ಕಥೆಯನ್ನು ಸಿನಿಮಾ ಮಾಡಲು ಹೊರಟಿರುವ ದಾಸ್ ಪ್ರಯತ್ನಕ್ಕೆ ಶ್ರೀ ವಿಕ್ಟರಿ ಸಿನಿ ಕ್ರಿಯೇಷನ್ಸ್ ಸಂಸ್ಥೆ ಆರ್ಥಿಕ ಅಭಯಹಸ್ತ ನೀಡಿದೆ.

ಇತ್ತೀಚೆಗೆ ಮುಹೂರ್ತವಾಗಿರುವ ಚಿತ್ರಕ್ಕೆ ಇನ್ನೂ ಹೆಸರಿಟ್ಟಿಲ್ಲ. 'ಪ್ರೊಡಕ್ಷನ್ ನಂ.1' ಎಂಬ ಹೆಸರಿನಲ್ಲಿ ಚಿತ್ರೀಕರಣ ಆರಂಭಿಸಿರುವ ಈ ಚಿತ್ರದಲ್ಲಿ, ವಿನಯ್ ಮತ್ತು ಆರತಿ ಎಂಬ ಹೊಸ ಪ್ರತಿಭೆಗಳು ನಾಯಕ, ನಾಯಕಿಯಾಗಿ ನಟಿಸುತ್ತಿದ್ದಾರೆ. ಶೋಭರಾಜ್ ಮತ್ತು ಶ್ರೀನಿವಾಸಮೂರ್ತಿ ಕೂಡ ಮುಖ್ಯಭೂಮಿಕೆಯಲ್ಲಿದ್ದಾರೆ.

ಪ್ರೇಮಕಥೆಯ ಮೇಲೆ ಖಳತನದ ಕಾರ್ಮೋಡ ಕವಿಯುವ ಮಾಮೂಲಿ ಕಥೆಯನ್ನು ಹೊಸ ಬಗೆಯಲ್ಲಿ ಹೇಳುವ ಉತ್ಸಾಹದಲ್ಲಿ ದಾಸ್ ಇದ್ದಾರೆ. ಅದಕ್ಕಾಗಿ ದಾಂಡೇಲಿ, ಧಾರವಾಡ, ಸಾಗರ ಮತ್ತು ಬೆಂಗಳೂರಿನ ಸುತ್ತಮುತ್ತ ಚಿತ್ರೀಕರಣ ನಡೆಸುವ ಯೋಜನೆ ಹಾಕಿಕೊಂಡಿದ್ದಾರೆ. ■